# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಯಾದಗಿರಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಬಂದಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ದೇವಿಬಾಯಿ ಗಂಡ ಪರಶುರಾಮ ಇವರು ಕರ್ತವ್ಯಲೋಪ ಮತ್ತು ಹಣಕಾಸಿನ ದುರುಪಯೋಗದಂತಹ ದುರ್ನಡತೆಯನ್ನು ಎಸಗಿರುವುದರಿಂದ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43 ಎ ಮತ್ತು 48(4)ರನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ 1) ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ವಿಚಾರಣಾ ವರದಿ ಸಂಖ್ಯೆ: ಕಂ/ಪ್ರಾಆಕ/ಜಿಪಂ/117/2019-20, ದಿನಾಂಕ-6/2/2020 ಹಾಗೂ ವಿಚಾರಣೆಗೆ ಹಾಜರು ಪಡಿಸಲಾದದಾಖಲಾತಿಗಳು, ರಸೀದಿಗಳು ಮತ್ತು ಅಪಾದಿತ ನೀಡಿರುವ ಹೇಳಿಕೆಗಳು.

2) ಪ್ರಾದೇಶಿಕ ಆಯುಕ್ತರು,ಕಲಬುರಗಿ ವಿಭಾಗ ಇವರ ವಿಚಾರಣಾ ನೋಟೀಸುಗಳು, ದಿನಾಂಕ-21.11.2019, 06.01.2020 ಮತ್ತು 17.01.2020.

3) ಶ್ರೀಮತಿ ದೇವಿ ಬಾಯಿ ಗಂಡ ಪರಶುರಾಮ, ಬಂದಳ್ಳಿ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ ಇವರು ಲಿಖಿತ ಹೇಳಿಕೆ ದಿನಾಂಕ : 13-1-2020.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಶ್ರೀಮತಿ ದೇವಿಬಾಯಿ ಗಂಡ ಪರಶುರಾಮ, ಬಂದಳ್ಳಿ ಗ್ರಾಮ ಪಂಚಾಯತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ ಇವರು ಅಧ್ಯಕ್ಷರಾದ ಅವಧಿಯಲ್ಲಿ ಬಂದಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಶ್ರೀ ದಿನೇಶ ತಂದೆ ಹಿರಾಮನ್ ಇವರನ್ನು ಸರ್ಕಾರದ ಸುತ್ತೋಲೆಯನ್ವಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಇವರಿಂದ ಪೂರ್ವಾನುಮತಿ ಪಡೆಯದೇ Lineman ಹುದ್ದೆಗೆ ಅಕ್ರಮವಾಗಿ ನೇಮಕಾತಿ ಮಾಡಿಕೊಂಡು ಸದರಿ ಸಿಬ್ಬಂಧಿಗೆ ಪ್ರತಿ ಮಾಹೆ ರೂ.5,000/-ದಂತೆ ಜನವರಿ 2019ರ ಮಾಹೆಯವರೆಗೆ ಒಟ್ಟು ರೂ.95,000/-ಗಳನ್ನು ಅನಧಿಕೃತವಾಗಿ ಪಾವತಿಸಿ ನಿಯಮಗಳನ್ನು ಉಲ್ಲಂಘಿಸಿರುವುದು.14ನೇ ಹಣಕಾಸು ಯೋಜನೆಯಡಿ ಕುಡಿಯುವ ನೀರು, ಮೋಟರ್ ದುರಸ್ತಿ ಮತ್ತು ಇತರೆ ಸಾಮಾಗ್ರಿ ಖರೀದಿಗೆ ಒಟ್ಟು ರೂ.6.99 ಲಕ್ಷ ಕ್ರಿಯಾ ಯೋಜನೆ ಪ್ರಕಾರ ನಿಗದಿಪಡಿಸಿದ್ದು, ಕುಡಿಯುವ ನೀರು ಮತ್ತು ಸಾಮಾಗ್ರಿ ಖರೀದಿಯಲ್ಲಿ 3 ಏಜೆನ್ಸಿಗಳಿಗೆ ಒಟ್ಟು ರೂ.18.02 ಲಕ್ಷಗಳನ್ನು ಪಾವತಿಸಿ KTPP ನಿಯಮಗಳನ್ನು ಉಲ್ಲಂಘಿಸಿರುತ್ತೀರಿ ಹಾಗೂ ಕ್ರಿಯಾ ಯೋಜನೆಯಲ್ಲಿ ನಿಗಧಿಪಡಿಸಿದ ಅನುದಾನಕ್ಕಿಂತ ಹೆಚ್ಚಿನ ಮೊತ್ತವನ್ನು ಪಾವತಿಸಿರುವುದು. ಕರವಸೂಲಿಯಲ್ಲಿ ದಾಖಲೆಗಳ ಪ್ರಕಾರ ಕಾಮಗಾರಿ ನಿರ್ವಹಿಸಿದವರಿಗೆ ಹಣವನ್ನು ಪಾವತಿಸದೆ ಬೇರೆಯವರ ಹೆಸರಿಗೆ ಮೊತ್ತವನ್ನು ಪಾವತಿಸಿರುತ್ತಾರೆ. ಚಾಮನಹಳ್ಳಿ ತಾಂಡದಲ್ಲಿ ಕರವಸಲಾತಿಗೆ ಅಧಿಕೃತವಾಗಿ ನೇಮಿಸಲಾದ ಶ್ರೀ ಮಲ್ಲಪ್ಪ ಬಿಲ್ ಕಲೆಕ್ಟರ್ ಇವರಿಂದ ಕರ ವಸೂಲಾತಿ ಮಾಡಿಸದೆ ಬೇರೆಯವರಿಂದ ಕರವಸೂಲಾತಿ ಮಾಡಿಸಿ,ಮಾಡಲಾದ ಕರವಸೂಲಾತಿಯನ್ನು ಪಂಚಾಯಿತಿನಿಧಿಗೆ ಜಮೆ ಮಾಡಿರುವ ಕುರಿತು ಯಾವುದೇ ದಾಖಲೆಗಳನ್ನು ಪಂಚಾಯಿತಿಯಲ್ಲಿ ಲಭ್ಯವಿರದೇ ಇರುವುದರಿಂದ ಕರವಸೂಲಾತಿ ಮೊತ್ತವನ್ನು ಸ್ವಂತಕ್ಕಾಗಿ ಉಪಯೋಗಿಸಿಕೊಂಡು ಅಕ್ರಮವೆಸಗಿ ಅಧಿಕಾರ ದುರುಪಯೋಗ ಪಡಿಸಿಕೊಂಡಿರುತ್ತಾರೆ. 2018-19 ನೇ ಸಾಲಿನ ಮನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಿದ ಸುಮಾರು ಕಾಮಗಾರಿಗಳನ್ನು District Programme Coordinator ಇವರಿಂದ ಅನುಮೋದನೆ ಪಡೆಯದೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ, ಹಣ ಪಾವತಿಸಿ ಕರ್ತವ್ಯ ಲೋಪ ವೆಸಗಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಪ್ರಕರಣ 43-ಎ(iii) ಮತ್ತು 48 (4)ರಡಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ದಿನಾಂಕ 22.11.2019, 06.01.2020 ಮತ್ತು 17.01.2020

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಸದರಿಯವರು ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಹಿಂದಿನ PDO ರವರು ZP ಅನುಮೋದನೆ ಪಡೆಯಬೇಕೆಂದು ತಿಳಿಸಿದ್ದರಿಂದ ನಡವಳಿಕೆಯಲ್ಲಿ ದಾಖಲಿಸಲಾಯಿತು. ಆದರೆ ಪ್ರಭು,ಪ್ರಭಾರ PDO ರವರು ತಾತ್ಕಾಲಿಕವಾಗಿ ಕರ ವಸೂಲಾತಿಯ ಹಣದಲ್ಲಿರೂ.5000/-ವನ್ನು ಪಾವತಿಸಿರುತ್ತಾರೆ, ನನ್ನ ತಪ್ಪೇನು ಇಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ PDO ರನ್ನು ಅಮಾನತ್ತು ಮಾಡಲಾಗಿದೆ ಎಂದು ತಿಳಿಸಿರುತ್ತಾರೆ. 14ನೇ ಹಣಕಾಸು ಆಯೋಗದಲ್ಲಿ ಸ್ವೀಕೃತಿಯಾಗಿರುವ ಅನುದಾನವನ್ನು ಕುಡಿಯುವ ನೀರಿಗೆ ಉಪಯೋಗಿಸ ಬಹುದೆಂದು ಸರ್ಕಾರದಿಂದ ಪತ್ರ ಬಂದಿರುತ್ತದೆ ಎಂದು PDO ರವರೆ ತಿಳಿಸಿರುತ್ತಾರೆ. ಜೊತೆಗೆ ಗ್ರಾಮ ಪಂಚಾಯಿತಿಯಲ್ಲಿ ಬರಗಾಲದ ಕಾರಣ ಕುಡಿಯುವ ನೀರಿಗೆ ಅಭಾವ ಉಂಟಾಗಿರುತ್ತದೆ, ಆದ್ದರಿಂದ ಕುಡಿಯುವ ನೀರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲು ನಾನೇ PDO ಗೆತಿಳಿಸಿರುತ್ತೇನೆ.ಅನಕ್ಷರಸ್ಥೆಯಾದ ನನಗೆ KTPP ಯ ಬಗ್ಗೆ ಅರಿವಿರುವುದಿಲ್ಲ. KTPP ಪಾಲಿಸುವುದು PDO ಕರ್ತವ್ಯವಾಗಿರುತ್ತದೆ,ಈ ಅವ್ಯವಹಾರದಲ್ಲಿ ನನ್ನ ಪಾತ್ರವೇನು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ PDOರನ್ನು ಅಮಾನತ್ತು ಮಾಡಲಾಗಿದೆಯೆಂದು ತಿಳಿಸಿರುತ್ತಾರೆ. ಅಧ್ಯಕ್ಷರು ಕರ ವಸೂಲಾತಿಯಲ್ಲಿ ಯಾವುದೇ ಕಾಮಗಾರಿ ಮಾಡಲು ಆದೇಶ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಕಾಮಗಾರಿ ಆದೇಶ ನೀಡಿದವರಿಗೆ ಮಾತ್ರ ಹಣ ಪಾವತಿಯಾಗಿದೆ. ಹಣ ಪಾವತಿಯಲ್ಲಿ PDO ರವರು ಅವರ ಅಧಿಕಾರ ದುರುಪಯೋಗ ಮಾಡಿಕೊಂಡಿರುತ್ತಾರೆಂದುತಿಳಿಸಿರುತ್ತಾರೆ. ಆದ್ದರಿಂದ PDO ರನ್ನು ಅಮಾನತ್ತು ಮಾಡಲಾಗಿದೆಯೆಂದು ತಿಳಿಸಿರುತ್ತಾರೆ.ಅಧ್ಯಕ್ಷರು ಬಿಲ್ ಕಲೆಕ್ಟರ್ ಗೆ ಯಾವ ಕಾರಣಕ್ಕೂ ಕರ ವಸೂಲಿ ಮಾಡಬಾರದೆಂದು ನಾನು ಹೇಳಿರುವುದಿಲ್ಲ,ಅದು ಅವರ ಕರ್ತವ್ಯ. ನನ್ನ ಮೇಲೆ ಈಗಾಗಲೇ ದುರುದ್ದೇಶದಿಂದ ಅವಿಶ್ವಾಸ ಗೊತ್ತುವಳಿ ಮಂಡಿಸಲು ಪ್ರಯತ್ನಿಸಿ,ನಿಶ್ಚಿತ ಸಂಖ್ಯೆಯಲ್ಲಿ ಸದಸ್ಯರು ಬಾರದೆ ಇದ್ದುದ್ದರಿಂದ ನಾನು ಮುಂದುವರೆದಿರುತ್ತೇನೆ, ಪಂಚಾಯಿತಿ ಅಭಿವೃದ್ಧಿ ಕಾರ್ಯ ಇದರಿಂದ ಕುಂಠಿತವಾಗಿದೆ ಎಂದು ಹೇಳಿರುತ್ತಾರೆ.

ದಿನಾಂಕ-13.1.2020ರಂದು ಅಧ್ಯಕ್ಷರು,ಬಂದಳ್ಳಿ ಗ್ರಾ.ಪಂ.ಯಲ್ಲಿ ಮಲ್ಲಪ್ಪ ಹೆಸರಿನ ಕರ ವಸೂಲಿಗಾರಾರು ಇರುವುದಿಲ್ಲ, ಮಲ್ಲಿಕಾರ್ಜುನ ತಂದೆ ಭೀಮಪ್ಪಡಾಲ್ ಎಂಬ ಕರವಸೂಲಿಗಾರರು ಇರುತ್ತಾರೆ. ಎಂದು ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆದಿರುತ್ತಾರೆ.ಕ್ರಿಯಾ ಯೋಜನೆಗೆ ಸಹಿ ಮಾಡುವುದು ಮತ್ತು FTO ಮಾಡುವುದು. ಉಳಿದೆಲ್ಲ PDO ಕರ್ತವ್ಯವಾಗಿರುತ್ತದೆ. ಸದರಿ PDO ಕರ್ತವ್ಯ ಲೋಪವೆಸಗಿರುವುದರಿಂದಲೇ ಅವರನ್ನುಅಮಾನತ್ತು ಮಾಡಲಾಗಿದೆ ಎಂದಿರುತ್ತಾರೆ.

ವಿಚಾರಣಾ ಅಧಿಕಾರಿಗಳ ಅಂಶಗಳು :

1. ಶ್ರೀ ದಿನೇಶ ತಂದೆ ಹಿರಾಮನ್ ಇವರನ್ನು Line man ಆಗಿ ಅಕ್ರಮವಾಗಿ ನೇಮಿಸಿರುವುದು ನಿಜ,ಇವರಿಗೆ ಈವರೆವಿಗೂ ರೂ.95,000/-ಪಾವತಿಸಿರುವುದು ಕಂಡುಬಂದಿದೆ.

2. 14ನೇ ಹಣಕಾಸು ಯೋಜನೆಯಲ್ಲಿ ಕುಡಿಯುವ ನೀರು ಬಾಬ್ತಿಗೆ ಅನುಮೋದಿತ ರೂ.6.99 ಲಕ್ಷ ಕ್ರಿಯಾ ಯೋಜನೆಗೆ KTPP ಅನ್ವಯ ಮಾಡದೇ 3 ಏಜೆನ್ಸಿಗಳಿಗೆ ಕ್ರಿಯಾ ಯೋಜನೆ ಮೊತ್ತಕ್ಕಿಂತ ಹೆಚ್ಚುವರಿ ಅಂದರೆ 14ನೇ ಹಣಕಾಸು ಯೋಜನೆಯಲ್ಲಿ ಕುಡಿಯುವ ನೀರಿ ಬಾಬ್ತಿಗೆ ರೂ.18.02 ಲಕ್ಷ ಪಾವತಿಸಿರುವುದು ಕಂಡು ಬಂದಿದೆ.

3. ಕರ ವಸೂಲಿಯಲ್ಲಿ ಕಾಮಗಾರಿಗಳನ್ನು ಮಾಡಿಸಿದ್ದು ದಾಖಲಾತಿಗಳನ್ನು ಪರಿಶೀಲಿಸಿದಾಗ ಅಂದರೆ 9 ಬಿಲ್ಲುಗಳಲ್ಲಿ ಕಾಮಗಾರಿ ನಿರ್ವಹಿಸಿದವರಿಗೆ ಬಿಟ್ಟು ಇನ್ನೊಬ್ಬರಿಗೆ ಅನುದಾನವನ್ನು ಚೆಕ್ ಮೂಲಕ ಪಾವತಿಸಿರುತ್ತಾರೆ, KTPP ಉಲ್ಲಂಘನೆಯಾಗಿದೆ, 14ನೇ ಹಣಕಾಸು ಮತ್ತು ಕರವಸೂಲಿ ಅನುದಾನದಲ್ಲಿ ಮಾಡಿದ ಗುತ್ತಿಗೆ ಕಾಮಗಾರಿಗಳಿಗೆ ಗುತ್ತಿಗೆ ದಾರರಲ್ಲದೇ ಬೇರೆಯವರಿಗೆ ಹಣ ಪಾವತಿಸಿರುವುದು ನಿಯಮಬಾಹಿರವಾಗಿದೆ.

4. ಗ್ರಾಮ ಪಂಚಾಯಿತಿಯಿಂದ ಕರ ವಸೂಲಿ ಮಾಡಲು ಶ್ರೀ ಮಲ್ಲಪ್ಪ ಬಿಲ್ ಕಲೆಕ್ಟರ್ ಅನಧೀಕೃತವಾಗಿ ನೇಮಕ ಮಾಡಲಾಗಿದ್ದು, ಚಾಮನಹಳ್ಳಿ ತಾಂಡದಲ್ಲಿ ಕರವಸೂಲಿಗಾಗಿ ನಾನು ಹೋಗಿರುವುದಿಲ್ಲವೆಂದು ಮೌಖಿಕ ಹೇಳಿಕೆ ನೀಡಿರುತ್ತಾರೆ.

5. 2018-19ನೇ ಸಾಲಿನ MGNREGA ಯೋಜನೆಯಡಿ ಅನುಷ್ಠಾನ ಗೊಳಿಸಿದ ಕಾಮಗಾರಿಗಳ ಪಟ್ಟಿಯಲ್ಲಿನ ಒಟ್ಟು ಕ್ರಮ ಸಂಖ್ಯೆ 111 ಕಾಮಗಾರಿಗಳಲ್ಲಿ 45 ಕಾಮಗಾರಿಗಳನ್ನು District Programme Co-ordinator ಇವರಿಂದ ಅನುಮೋದನೆ

ಪಡೆಯದೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಹಣ ಪಾವತಿಸಿರುವುದು ಕಂಡು ಬರುತ್ತದೆ.

6. ಸದರಿ ಪ್ರಕರಣದಲ್ಲಿ ಬಂದಳ್ಳಿ ಗ್ರಾ.ಪಂ. ಪ್ರಭಾರಿ PDO ರವರನ್ನು ಅಮಾನತ್ತು ಮಾಡಲಾಗಿದೆ.

ಗ್ರಾಮ ಪಂಚಾಯಿತಿಯಲ್ಲಿ ಜಿಲ್ಲಾ ಪಂಚಾಯಿತಿಯ ಪೂರ್ವಾನುಮೋದನೆಯಿಲ್ಲದೆ ನೌಕರರನ್ನು ತೆಗೆದುಕೊಳ್ಳುವಂತಿಲ್ಲ ಹಾಗೂ ಲೈನ್ ಮನ್ ಹುದ್ದೆಗೆ ಪಂಚಾಯತಿಯಲ್ಲಿ ನೇಮಕಾತಿ ಮಾಡುವಂತಿಲ್ಲ ಎಂಬುದರ ಕುರಿತು ಜಿಲ್ಲಾ ಪಂಚಾಯಿತಿ ಸರ್ಕಾರದ ಆದೇಶ ಉಲ್ಲೇಖಿಸಿರುತ್ತಾರೆ- ಗ್ರಾಅಪ/22/ಗ್ರಾಪಂಸಿ/2014, ದಿನಾಂಕ-10/9/2014. ಆದರೆ, ಬಂದಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ದೇವಿಬಾಯಿ ಇದನ್ನು ಉಲ್ಲಂಘಿಸಿ ಲೈನ್ ಮನ್ ನೇಮಕಾತಿ ಮಾಡಿ ಅವರಿಗೆ ರೂ. 95,000/-ಗಳನ್ನು ಪಾವತಿಸಿರುವುದು ಆರ್ಥಿಕ ದುರ್ನಡತೆಯಾಗಿರುತ್ತದೆ.

14ನೇ ಹಣಕಾಸು ಯೋಜನೆಯಡಿ ಕುಡಿಯುವ ನೀರಿನ ಸಾಮಾಗ್ರಿಗೆ ಅನುಮೋದನೆಯಾಗಿರುವ ಮೊತ್ತ ರೂ.6.99 ಲಕ್ಷ, ವೆಚ್ಚ ಮಾಡಿರುವುದು ರೂ.18.02 ಲಕ್ಷ, KTPP ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುತ್ತಾರೆ. ದಾಖಲಾತಿ ಪರಿಶೀಲಿಸಲಾಗಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ 111 ಕಾಮಗಾರಿಗಳಲ್ಲಿ ಒಟ್ಟು 45 ಕಾಮಗಾರಿಗಳು Distrit Programme Co-orrdinator ಅನುಮೋದನೆಯಿಲ್ಲದೆ ಅನುಷ್ಠಾನವಾಗಿದೆ ಹಾಗೂ ಹಣ ಪಾವತಿಯಾಗಿರುವುದು ಕಂಡುಬರುತ್ತದೆ.

ಅಧ್ಯಕ್ಷರು ಶ್ರೀಮತಿ ದೇವಿಬಾಯಿ ಗಂಡ ಪರಶುರಾಮ ಚೌವ್ಹಾಣ ಸಲ್ಲಿಸಿರುವ ಲಿಖಿತ ಹೇಳಿಕೆ ಪರಿಶೀಲಿಸಿದಾಗ ಸದರಿಯವರ ಮೇಲೆ ಹೊರಿಸಲಾಗಿರುವ ಆರೋಪಗಳ ಕುರಿತು ಯಾವುದೇ ಸಮರ್ಥನೀಯ ದಾಖಲಾತಿ ಸಲ್ಲಿಸಿರುವುದಿಲ್ಲ. ಕಾರಣ ಇವರ ಹೇಳಿಕೆ ಸಮಂಜಸವಾಗಿರುವುದಿಲ್ಲ.

KPR (Grampanchayat Budget and Audit) ನಿಯಮಗಳು.2006 ನಿಯಮ 62ರನ್ವಯ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಗ್ರಾಮ ಪಂಚಾಯಿತಿಯ ಮುಖ್ಯಕಾರ್ಯನಿರ್ವಾಹಕರಾಗಿರತಕ್ಕದ್ದು ಮತ್ತು ಅವನು ಅಧಿನಿಯಮದ ಯಾವುದೇ ಇತರ ಉಪಬಂಧದ ಅಥವಾ ಅದರ ಅಡಿಯಲ್ಲಿ ಚಲಾಯಿಸಬಹುದಾದ ಪ್ರಕಾರ್ಯಗಳು ಮತ್ತು ಅಧಿಕಾರಗಳ ಜೊತೆಗೆ ಗ್ರಾಮ ಪಂಚಾಯಿತಿಯ ದಾಖಲೆಗಳನ್ನು ನೋಡುವುದು ಅವನ ಕರ್ತವ್ಯವಾಗಿರುತ್ತದೆ ಹಾಗೂ ಗ್ರಾಮ ಪಂಚಾಯಿತಿಯ ಹಣಕಾಸಿನ ವ್ಯವಹಾರಗಳ ಅಧಿಕಾರವನ್ನು ಗ್ರಾಮ ಪಂಚಾಯಿತಿಯ. ಅಧ್ಯಕ್ಷ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಜಂಟಿಯಾಗಿ ನಿರ್ವಹಿಸಬೇಕಾಗಿರುತ್ತದೆ. ಅಲ್ಲದೆ KPR ಕಾಯ್ದೆ 1993 ಕಲಂ 286 ರನ್ವಯ ಗ್ರಾಮ ಪಂಚಾಯಿತಿಯ ಪ್ರತಿಯೊಬ್ಬ ಸದಸ್ಯನು ಲೋಕ ನೌಕರರಾಗಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನೊಳಗೊಂಡಂತೆ ಸಂಬಂಧಿಸಿದ ದಾಖಲಾತಿಯನ್ನು ಪರಿಶೀಲಿಸಿದಾಗ ಬಂದಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ದೇವಿಬಾಯಿ ಗಂಡ ಪರಶುರಾಮ ಚೌವ್ಹಾಣ ಇವರು ಸರ್ಕಾರದ ಆದೇಶ ಮತ್ತು ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯ ಲೋಪ ಮತ್ತು ಹಣಕಾಸಿನ ದುರುಪಯೋಗ ಆರ್ಥಿಕ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಇವರ ಮೇಲೆ ಹೊರಿಸಲಾದ ಆರೋಪ ಸಾಬೀತಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(1) (V) ರನ್ವಯ ಪಂಚಾಯತ್ ನ ಯಾವುದೇ ಬೇರೆ ರೀತಿಯ ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ ಕರಾರು ಸಂಬಂಧ ಅಥವಾ ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ ಕರಾರು ಸಂಬಂಧ ಅಥವಾ ಕಾಮಗಾರಿಗಳಿಗೆ ಸಂಬಂಧಿಸಿದ ಯಾವುದೇ ವ್ಯವಹಾರದಲ್ಲಿ ಕುಟುಂಬದ ಹತ್ತಿರದ ಸಂಬಂಧಿಕರಾಗಿರುವ ಯಾವೊಬ್ಬ ವ್ಯಕ್ತಿಯೊಂದಿಗೆ ಪ್ರತ್ಯಕ್ಷವಾಗಿ ತೊಡಗಿಸಿಕೊಂಡಿರುವುದು ಕಂಡು ಬಂದರೆ ಅಥವಾ ಪಾಲುದಾರರದಂತೆ ನೌಕರನಂತೆ ಅಥವಾ ಅನ್ಯತಾ ಸಂಘ ಸಂಸ್ಥೆ ಮಂಡಳಿಯಲ್ಲಿ ಸದಸ್ಯನಂತೆ ಸಹಭಾಗಿಯಾಗಿರುವನೆಂದು ಕಂಡು ಬಂದರೆ ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂತ ವಿಚಾರಣೆ ಮಾಡಿದ ನಂತರ ತೆಗೆದುಹಾಕುವುದು ಸೂಕ್ತವೆಂದು ಭಾವಿಸಿದ್ದರೇ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದುಹಾಕಬಹುದು ಎಂದು ತಿಳಿಸಿದೆ.

ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ ಆರೋಪಗಳು ಸಾಬೀತಾಗಿರುವುದರಿಂದ ಸರ್ಕಾರವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮದ 1993ರ ಪ್ರಕರಣ 43 (ಎ) ಮತ್ತು 48 (4) ರನ್ವಯ ಶ್ರೀಮತಿ ದೇವಿಬಾಯಿ ಗಂಡ ಪರಶುರಾಮ ಚೌವ್ಹಾಣ, ಬಂದಳ್ಳಿ ಗ್ರಾಮ ಪಂಚಾಯತಿ ರವರನ್ನು ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನದಿಂದ ತೆಗೆದು ಹಾಕಲು ನಿರ್ಣಯಿಸಿದೆ. ಆದರಂತೆ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 113 ಜಿಪಿಎಸ್ 2020,</u>
<u>ಬೆಂಗಳೂರು, ದಿನಾಂಕ 20.03.2020</u>

ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಆಪಾದಿತ ಅಧ್ಯಕ್ಷರಾದ ಶ್ರೀಮತಿ ದೇವಿಬಾಯಿ ಗಂಡ ಪರಶುರಾಮ ಚೌವ್ಹಾಣ, ಬಂದಳ್ಳಿ ಗ್ರಾಮ ಪಂಚಾಯತಿ, ಯಾದಗಿರಿ ತಾಲ್ಲೂಕು ,ಯಾದಗಿರಿ ಜಿಲ್ಲೆ ಇವರು ಲೈನ್ ಮನ್ ಹುದ್ದೆಗೆ ಶ್ರೀ ದಿನೇಶ್ ತಂದೆ ಹಿರೇಮನ್ ಇವರು ಅನಧಿಕೃತವಾಗಿ ನೇಮಕಾತಿ ಮಾಡಿ ರೂ.95,000/- ವೇತನ ನೀಡಿರುವುದು, 14ನೇ ಹಣಕಾಸು ಯೋಜನೆಯಡಿ ಅನುಮೋದಿತ ರೂ.6.99 ಲಕ್ಷ ಕ್ರಿಯಾ ಯೋಜನೆ ಮೊತ್ತಕ್ಕಿಂತ ಹೆಚ್ಚಿನ ಮೊತ್ತ ಅಂದರೆ ರೂ.18.32 ಲಕ್ಷ ಹಣವನ್ನು 3 ಏಜೆನ್ಸಿಗಳಿಗೆ ಕುಡಿಯುವ ನೀರಿನ ಸಾಮಗ್ರಿ ಖರೀದಿಯಲ್ಲಿ KTPP ನಿಯಮ ಉಲ್ಲಂಘನೆ ಮಾಡಿ ಕರ್ತವ್ಯ ಲೋಪವೆಸಗಿರುತ್ತಾರೆ.2018-19ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ಪಟ್ಟಿಯಲ್ಲಿ ಒಟ್ಟು 111 ಕಾಮಗಾರಿಗಳ ಪೈಕಿ 45 ಕಾಮಗಾರಿಗಳನ್ನು District Programme Coordinator ಇವರಿಂದ ಅನುಮೋದನೆ ಪಡೆಯದೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಹಣ ಪಾವತಿಸಿರುವ ಆರೋಪಗಳು ಸಾಬೀತಾಗಿರುತ್ತದೆ. ಆದ್ದರಿಂದ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮದ 1993ರ ಪ್ರಕರಣ 43 (ಎ) ಮತ್ತು 48 (4) ರನ್ವಯ ಶ್ರೀಮತಿ ದೇವಿಬಾಯಿ ಗಂಡ ಪರಶುರಾಮ ಚೌವ್ಹಾಣ, ಬಂದಳ್ಳಿ ಗ್ರಾಮ ಪಂಚಾಯತಿ ,ಯಾದಗಿರಿ ತಾಲ್ಲೂಕು ಯಾದಗಿರಿ ಜಿಲ್ಲೆ ಇವರನ್ನು ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನದಿಂದ ತೆಗೆದುಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 21/03/2020.
(ಬಿ.ನವೀನ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ :

1) ಕಾರ್ಯದರ್ಶಿಗಳು, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯಿತ್ ಯಾದಿಗಿರಿ ಯಾದಗಿರಿ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿಗಳು,ತಾಲ್ಲೂಕು ಪಂಚಾಯತಿ ಯಾದಗಿರಿ,ಯಾದಗಿರಿ ಜಿಲ್ಲೆ.
4) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಂದಳ್ಳಿ ಗ್ರಾಮ ಪಂಚಾಯತಿ, ಯಾದಗಿರಿ ತಾಲ್ಲೂಕು ಯಾದಗಿರಿ ಜಿಲ್ಲೆ.
5) ಶ್ರೀಮತಿ ದೇವಿಬಾಯಿ ಗಂಡ ಪರಶುರಾಮ ಚೌವ್ಹಾಣ, ಬಂದಳ್ಳಿ ಗ್ರಾಮ ಪಂಚಾಯತಿ , ಯಾದಗಿರಿ ತಾಲ್ಲೂಕು ಯಾದಗಿರಿ ಜಿಲ್ಲೆ.
6) ಗಣಕ ಕೋಶ ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
7) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ :

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
3) ನಿರ್ದೇಶಕರು (ಪಂ.ರಾಜ್-1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ